# ನಿನ್ನೆ ನಂದಿ ಗ್ರಾಮ ಇಂದು ನಮ್ಮ ಗ್ರಾಮ ; ಅಲ್ಲಿ ಲಾಲ್‌ಘಡ್ ಇಲ್ಲಿ ಮಲ್ನಾಡ್!

ಜೂನ್ 10–2009ರಂದು ಕರ್ನಾಟಕದ ಬಿಜೆಪಿ ಸರ್ಕಾರವು ಮತ್ತೊಮ್ಮೆ ಕುದೆಮುಖ ರಾಷ್ಟ್ರೀಯ ಉದ್ಯಾನ ಯೋಜನೆಯನ್ನು ಜಾರಿ ಮಾಡಲು ಕೇಂದ್ರ ಸರ್ಕಾರದ ಮುಂದೆ ಪ್ರಸ್ತಾಪ ಇಟ್ಟಿದೆ. ಅಲ್ಲದೆ 1300 ಕುಟುಂಬಗಳನ್ನು ಒಕ್ಕಲೇಳಿಸಿ ಪ್ರತಿ ಕುಟುಂಬಕ್ಕೂ ಅವರ ಎಲ್ಲಾ ಖರ್ಚು–ವೆಚ್ಚಗಳಿಗಾಗಿ 1 ಲಕ್ಷದಿಂದ 10 ಲಕ್ಷದವರೆಗೆ ಪರಿಹಾರ ಕೊಡುತ್ತೇವೆಂದು ಕೇಂದ್ರ ಸರ್ಕಾರದ ಅರಣ್ಯ ಖಾತೆ ಸಚಿವರಾದ ಜೈರಾಂರಮೇಶ್ ಹೇಳಿದ್ದಾರೆ. ರಾಜ್ಯದಲ್ಲಿ ಒಂದು ವರ್ಷದ ಹಿಂದೆ ಅಂದರೆ ಇದೇ ಬಿಜೆಪಿ ಮತ್ತು ದಳ ಮೈತ್ರಿ ಸರ್ಕಾರವಿದ್ದಾಗ ಕು.ರಾ.ಉ. ವ್ಯಾಪ್ತಿಯ ಹತ್ತಾರು ಹಳ್ಳಿಯ ಜನರಿಗೆ ಹಂಗಾಮಿ ಹಕ್ಕುಪತ್ರ ಕೊಟ್ಟು "ನಿಮ್ಮನ್ನು ಒಕ್ಕಲೆಬ್ಬಿಸುವುದಿಲ್ಲ"ಎಂದು ನರಿ ಬುದ್ಧಿ ತೋರಿಸಿದ್ದಾರೆ. ಅಲ್ಲದೆ ಲೋಕಸಭಾ ಚುನಾವಣೆ ಸಂದರ್ಭದಲ್ಲಿ ನೂರಾರು ಜನರನ್ನು ಅರೆಸ್ಟ್ ಮಾಡಿ ಚಿತ್ರ ಹಿಂಸೆ ಕೊಟ್ಟು, ಸುಳ್ಳು ಕೇಸುಗಳನ್ನು ಹಾಕಿ ಜೈಲಿಗೆ ತಳ್ಳುತ್ತಿದ್ದಾಗ ಜನರು ಇದನ್ನು ವಿರೋಧಿಸಿ "ನಮ್ಮ ಹೆಣವು ಈ ಭೂಮಿಯಿಂದ ಕದಲುವುದಿಲ್ಲ " ಎಂದು ಸ್ಪಷ್ಟವಾಗಿ ಹೇಳಿದಾಗ ಇದೇ ಮನುಷ್ಯ ವಿರೋಧಿ ಬಿಜೆಪಿ ಸರ್ಕಾರದ ಛೇಲಾಗಳಾದ ಪೋಲೀಸಿನವರು ಎಲ್ಲಾ ಕಡೆಗಳಲ್ಲಿ ಜನ ಸಂಪರ್ಕ ಸಭೆಗಳನ್ನು ಮಾಡಿ ಕು.ರಾ.ಉ. ವ್ಯಾಪ್ತಿಯ ಜನರಿಗೆ ಸ್ವಯಂ ಉದ್ಯೋಗಕ್ಕೆ ಪ್ರೋತ್ಸಾಹಿಸುತ್ತೇವೆಂದೂ ಉದ್ಯೋಗ ಕೊಡುತ್ತೇವೆಂದೂ ಹಸಿ ಹಸಿ ಸುಳ್ಳುಗಳನ್ನು ಹೇಳುತ್ತಿದೆ.

## ಆತ್ಮೀಯ ಆದಿವಾಸಿ ರೈತ ಕೂಲಿ ಜನರೆ,

ನೋಡಿ ! ಕರ್ನಾಟಕ ಬಿಜೆಪಿ ಸರ್ಕಾರ ಜನಪರವೆಂದು, ರೈತಪರವೆಂದು ರೈತರ ಮೇಲೆ ಪ್ರಮಾಣ ಮಾಡಿ ಅಧಿಕಾರ ಹಿಡಿದು ತಮ್ಮ ಕುರ್ಚಿ ಗಟ್ಟಿಯಾದ ನಂತರ ಜನರನ್ನು ಹೇಗೆ ಮೋಸಗೊಳಿಸುತ್ತಿದೆ ಎಂದು

1) ಜನರ ಭೂಮಿಯನ್ನೇ ಕಿತ್ತುಕೊಂಡು ಬೀದಿಪಾಲು ಮಾಡಲು ಪ್ರಯತ್ನಿಸುತ್ತಿರುವುದು..
2) ಜನರಿಗೆ ಇರಲು ನೆಲೆಯೇ ಇಲ್ಲದಂತೆ ಮಾಡುತ್ತಾ ಉದ್ಯೋಗದ ಮತ್ತು ಸ್ವಯಂ ಉದ್ಯೋಗದ ಭರವಸೆ ನೀಡುತ್ತಿರುವದು.
3) ಒಮ್ಮೆ ಜನರನ್ನು ಒಕ್ಕಲೇಳಿಸುತ್ತೇವೆಂದೂ, ಇನ್ನೊಮ್ಮೆ ಒಕ್ಕಲೇಳಿಸುವುದಿಲ್ಲವೆಂದೂ ರಾಷ್ಟ್ರೀಯ ಉದ್ಯಾನ ಯೋಜನೆಯ ಕಲ್ಲುಗುಪ್ಪೆಗಳನ್ನು ಮತ್ತು ಪ್ರವಾಸೋದ್ಯಮಕ್ಕಾಗಿ ದೊಡ್ಡ ದೊಡ್ಡ ರಸ್ತೆಗಳನ್ನು ಮಾಡುತ್ತಾ ಜನರನ್ನು ಇಕ್ಕಟ್ಟಿನ ಪರಿಸ್ಥಿತಿಯಲ್ಲಿ ಸಿಕ್ಕಿಸುವುದು.
4) ರಾಷ್ಟ್ರೀಯ ಉದ್ಯಾನ ಯೋಜನೆಯೊಳಗೆ ರೈಲುಹಳಿ ಮತ್ತು ರಸ್ತೆಗಳನ್ನು ಮಾಡುವುದಿಲ್ಲವೆಂದು ಅಗಲವಾದ ರಸ್ತೆಗಳನ್ನು ಮಾಡುತ್ತಿದೆ.
5) ಲಾಭಕ್ಕಾಗಿ ಕರೆಂಟ್ ತಯಾರಿಸಲು ಕು.ರಾ.ಉ.ದೊಳಗಿನ ಹಳ್ಳ–ಹೊಳೆಗಳಿಗೆ ಡ್ಯಾಂ ಕಟ್ಟಲು ಸರ್ವೆ ಕೆಲಸಗಳನ್ನು ನಡೆಸುತ್ತಿದೆ.
6) ಸರ್ಕಾರದ ಜನವಿರೋಧಿ ನೀತಿಯನ್ನು ಮತ್ತು ತಮ್ಮ ಬದುಕಿನ ಭದ್ರತೆಗಾಗಿ ತಮ್ಮದೇ ಆದ ಸಿಪಿಐ (ಮಾವೋವಾದಿ) ಪಕ್ಷದೊಂದಿಗೆ ಸೇರಿ ಹೋರಾಟಕ್ಕೆ ನಿಂತ ಜನರ ಒಗ್ಗಟ್ಟನ್ನು ಮುರಿಯಲು ಮತ್ತು ಜನರ ತಿಳುವಳಿಕೆಯನ್ನು ಮೊಟಕುಗೊಳಿಸಲು ಜನರ – ಜನರ ನಡುವೆ ಒಡೆದಾಳುವ ನೀತಿಯನ್ನು ಅನುಸರಿಸುತ್ತಿರುವುದು.
7) ಆಳುವ ವರ್ಗಗಳು ನೂರಾರು ಸುಧಾರಣಾ ನೀತಿಗಳನ್ನು ಮತ್ತು ಅಭಿವೃದ್ಧಿಯ ಹೆಸರಿನಲ್ಲಿ ಪ್ಯಾಕೇಜ್ ಹಣವನ್ನು ಬಿಡುಗಡೆ ಮಾಡಿ ಜನರ ಹೋರಾಟ ಪ್ರಜ್ಞೆಯನ್ನು ದಿಕ್ಕು ತಪ್ಪಿಸುತ್ತಿರುವುದು.

8) ಇಷ್ಟೆಲ್ಲಾ ಮಾಡಿದರೂ ಜನರನ್ನು ಮಣಿಸಲು ಸಾಧ್ಯವಾಗದಿದ್ದಾಗ ಜನರ ಮೇಲೆ ದಮನ, ದೌರ್ಜನ್ಯ ಸುಳ್ಳುಕೇಸುಗಳು, ಅರೆಸ್ಟ್‌ಗಳು ಚಿತ್ರಹಿಂಸೆಗಳನ್ನು ಪ್ರಾರಂಭಿಸುತ್ತಿರುವುದು,

ಜನರ ಮೇಲಿನ ಈ ರೀತಿಯ ದೌರ್ಜನ್ಯ ಬರೀ ಮಲೆನಾಡಿನಲ್ಲಿ ಮಾತ್ರ ಇಲ್ಲ, ಇಡೀ ಭಾರತದಲ್ಲಿಯೇ ಒಟ್ಟು 70 ಅಭಯಾರಣ್ಯಗಳಿದ್ದು ಅದರಲ್ಲಿ 37ಅನ್ನು ರಾಷ್ಟ್ರೀಯ ಉದ್ಯಾನವೆಂದೂ ಸದ್ಯಕ್ಕೆ ಒಂದು ಲಕ್ಷ ಜನರನ್ನು ಒಕ್ಕಲೆಬ್ಬಿಸಲು ಅರಣ್ಯ ಸಂರಕ್ಷಣೆ ಮತ್ತು ಅಭಿವೃದ್ಧಿಗಾಗಿ ಎಂದು 800 ಕೋಟಿ ರೂಪಾಯಿಗಳನ್ನು ನಿಗದಿ ಮಾಡಿದೆ. ಇಡೀ ಭಾರತದಾದ್ಯಂತ ನೂರಾರು ಜನವಿರೋಧಿ ಯೋಜನೆಗಳಾದ ರಕ್ಷಿತಾರಣ್ಯ, ಮೀಸಲು ಅರಣ್ಯ ಅಭಯಾರಣ್ಯ, ವಿಶೇಷ ಆರ್ಥಿಕ ವಲಯ ಡ್ಯಾಮ್‌ಗಳು ಪ್ರವಾಸೋದ್ಯಮಗಳು ಮುಂತಾದ ಹಲವಾರು ಯೋಜನೆಗಳನ್ನು ಅಭಿವೃದ್ಧಿಯ ಹೆಸರಿನಲ್ಲಿ ಮಾಡುತ್ತಾ ಜನರ ಬದುಕನ್ನೇ ಕಿತ್ತುಕೊಳ್ಳುತ್ತಿದ್ದಾರೆ.

ಹೀಗೆ ನೂರಾರು ಯೋಜನೆಗಳನ್ನು ಮಾಡಿ ಜನರ ಬದುಕನ್ನು ನಾಶ ಮಾಡುತ್ತಿರುವುದಲ್ಲದೇ ನೇರವಾಗಿ ಸುಳ್ಳು ಎನ್‌ಕೌಂಟರ್ ಮೂಲಕ ಜನರನ್ನು ಮತ್ತು ಜನರ ಸೈನ್ಯವನ್ನು ಈ ಆಳುವ ವರ್ಗಗಳು ನಾಶ ಮಾಡುತ್ತಿದ್ದಾರೆ. ಕಡಿಮೆ ಸಂಖ್ಯೆಯಲ್ಲಿರುವ ಅವರನ್ನು ತಡೆಯಲು ನಮ್ಮಿಂದ ಸಾಧ್ಯವಿಲ್ಲವೇ? ಇಂತಹವರನ್ನು ಸಹಿಸಿಕೊಂಡು ಇರಬೇಕೆ ? ಅನ್ಯಾಯಗಳೇ ಮೆರೆಯುತ್ತಿರುವಾಗ ನ್ಯಾಯಕ್ಕೆ ಬೆಲೆ ಇಲ್ಲವೆ ? ನ್ಯಾಯ ನಮ್ಮದಲ್ಲವೇ

## ಹಾಗಾದರೆ ನಾವೇನು ಮಾಡಬೇಕು ?

ಜನರ ಶಕ್ತಿ ಒಂದಾದರೇ ಯಾವ ಶಕ್ತಿಯೂ ಜನರ ಶಕ್ತಿಯನ್ನು ತಡೆಗಟ್ಟಲು ಸಾಧ್ಯವಿಲ್ಲ, "ಪ್ರಜಾ ಸೈನ್ಯವಿಲ್ಲದೆ ಪ್ರಜೆಗಳಿಗೆ ಏನೂ ಇಲ್ಲ" ಉದಾಹರಣೆಗೆ ನೋಡುವುದಾದರೆ ಪಶ್ಚಿಮ ಬಂಗಾಳದ ನಂದಿ ಗ್ರಾಮ ಮತ್ತು ಲಾಲ್‌ಘಡ್‌ಗಳಲ್ಲಿ ವಿಶೇಷ ಆರ್ಥಿಕ ವಲಯದ ಹೆಸರಿನಲ್ಲಿ ಸುಮಾರು ನಾಲ್ಕೂವರೆ ಸಾವಿರ ಎಕರೆಯಷ್ಟು (ಅಂದರೆ ಸಂಪೂರ್ಣ ಒಂದು ಜಿಲ್ಲೆ, ಅಂದರೆ 6-7 ತಾಲ್ಲೂಕುಗಳಷ್ಟು) ಭೂಮಿಯಲ್ಲಿ ಒಕ್ಕಲೆಬ್ಬಿಸಲು ಪ್ರಯತ್ನಿಸಿದಾದ ಜನರು ಒಗ್ಗಟ್ಟಿನಿಂದ ಬೀದಿಗಿಳಿದು (ಮಕ್ಕಳು-ಹೆಂಗಸರು, ಮುದುಕರೆನ್ನದೆ) ರಸ್ತೆ ತಡೆ, ದರಣಿಗಳು, ಉಪವಾಸ ಸತ್ಯಾಗ್ರಹಗಳನ್ನು ಮಾಡಿದರು. ಅಲ್ಲದೆ ಹಳ್ಳಿ ಒಳಗಡೆ ಯಾರೂ ಬಾರದಂತೆ ಮರಕಡಿದು ಹಾಕುವುದು, ರಸ್ತೆಯಲ್ಲಿ ದೊಡ್ಡ ದೊಡ್ಡ ಗುಂಡಿ ತೋಡುವುದು, ಇಡೀ ಹಳ್ಳಿಯ ಜನರೆಲ್ಲಾ ಸೇರಿ ರಸ್ತೆಯಲ್ಲಿ ಪೋಲೀಸ್ ವ್ಯಾನ್ ಬರುವಾಗ ಮಲಗಿ ಪ್ರತಿಭಟಿಸುವುದನ್ನು ಮಾಡಿದರು. ಅದಲ್ಲದೆ ಜನರದೇ ಆದ ಸಿಪಿಐ (ಮಾವೋವಾದಿ) ಪಕ್ಷದೊಂದಿಗೆ ಸೇರಿ ತಮ್ಮದೇ ಸೈನ್ಯ ಕಟ್ಟಿಕೊಂಡು ತಮ್ಮಲ್ಲಿರುವ ಆಯುಧದೊಂದಿಗೆ ಆಳುವ ವರ್ಗದ ಸೈನ್ಯದ ವಿರುದ್ದ ಹೋರಾಟಕ್ಕೆ (ಯುದ್ಧಕ್ಕೆ) ನಿಂತರು. ಹೀಗೆ 6-7 ತಾಲ್ಲೂಕುಗಳ ಜನ ಪ್ರತಿಭಟಿಸಿದಾಗ ಆಳುವ ವರ್ಗದ ಸೈನ್ಯ ಸೋಲಲೇಬೇಕಾಯಿತು. 1 ವರ್ಷಗಳ ಕಾಲ ತಮ್ಮದೇ (ಜನರದ್ದೇ) ಅಧಿಕಾರ ಸ್ಥಾಪಿಸಿದರು. ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಈ ಪ್ರದೇಶವನ್ನು ವಶಪಡಿಸಿಕೊಳ್ಳಲು ಹೆಣಗಾಡುತ್ತಿವೆ. ಜನರು ಎಲ್ಲಾ ರೀತಿಯ ದೌರ್ಜನ್ಯಗಳನ್ನು ಮೀರಿ ನಿಂತರು.

ಹೀಗೆ ಆಳುವ ವರ್ಗದ. ಭೂಮಾಲೀಕರ, ಸಾಮ್ರಾಜ್ಯ ಶಾಹಿಗಳ ಕುತಂತ್ರವನ್ನು ಬಯಲುಗೊಳಿಸುತ್ತಾ ಜನರು ತಮ್ಮದೇ ಪಕ್ಷದೊಂದಿಗೆ ಒಗ್ಗಟ್ಟಾಗುತ್ತಾ, ಜನರ ಸೈನ್ಯದೊಂದಿಗೆ ಸೇರುತ್ತಾ ಸೈನ್ಯವನ್ನು ಬೆಳೆಸುತ್ತಾ ಒಗ್ಗಟ್ಟಿನಿಂದ ಹೋರಾಡಿ ತಮ್ಮ ಬದುಕನ್ನು ಉಳಿಸೋಣ ಶತೃ ಸೈನ್ಯವನ್ನು ನಾಶ ಮಾಡುತ್ತಾ, ಜನರ ಸೈನ್ಯವನ್ನು ಬೆಳೆಸುತ್ತಾ ಅಧಿಕಾರವನ್ನು ಸ್ಥಾಪಿಸೋಣವೆಂದು ನಮ್ಮ ಸಂಘಟನೆಗಳು ಜನರಿಗೆ ಮನವಿ ಮಾಡುತ್ತದೆ.

- ❖ ನಾಡಿನ ಎಲ್ಲಾ ಜನರು ಒಗ್ಗಟ್ಟಾಗೋಣ !
- ❖ ಜನವಿರೋಧಿ ಯೋಜನೆಗಳನ್ನು ಒಗ್ಗಟ್ಟಿನಿಂದ ವಿರೋಧಿಸೋಣ !
- ❖ ಪೋಲೀಸ್ ಮಾಹಿತಿದಾರರಾಗದಿರೋಣ, ಮಾಹಿತಿದಾರರಿಗೆ ತಕ್ಕ ಪಾಠ ಕಲಿಸೋಣ !
- ❖ ನ್ಯಾಯಕ್ಕಾಗಿ ಹೋರಾಡೋಣ., ನ್ಯಾಯವನ್ನು ಪಡೆಯೋಣ !
- ❖ ದಮನ, ದೌರ್ಜನ್ಯ ಸುಳ್ಳು ಕೇಸುಗಳು, ಸುಳ್ಳು ಎನ್‌ಕೌಂಟರ್‌ರನ್ನು ವಿರೋಧಿಸೋಣ !
- ❖ ಆಳುವ ವರ್ಗದ ಸೇನೆಯನ್ನು ಬಹಿಷ್ಕರಿಸೋಣ, ಜನರ ಸೈನ್ಯವನ್ನು ಬಲಪಡಿಸೋಣ !

ಆದಿವಾಸಿ ರೈತ ಕೂಲಿ ಸಂಘ
ಕರ್ನಾಟಕ ರೈತ ಕೂಲಿ ಸಂಘ
ಜುಲೈ 2009 ಕ್ರಾಂತಿಕಾರಿ ಆದಿವಾಸಿ ಮಹಿಳಾ ಸಂಘ
ಮಹಿಳಾ ವಿಮುಕ್ತಿ